ಈ) ಅಂತಹ ಪ್ರಕರಣಗಳು ವರದಿಯಾಗಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೈತ ಕಾಯಕ ಕೆರೆಯೋಜನೆಗಳು

4442 (5269) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತ ಕಾಯಕ ಕೆರೆ ಯೋಜನೆ ಕಾರ್ಯಕ್ರಮವನ್ನು ರಾಜ್ಯದಲ್ಲಿ ಜಾರಿ ಗೊಳಿಸಲಾಗಿದೆಯೇ;

ಆ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಕೆರೆಗಳನ್ನು ಈ ಯೋಜನೆಗೆ ಒಳಪಡಿಸಲಾಗಿದೆ;

ಇ) ಯೋಜನೆಯ ಅನುಷ್ಠಾನಕ್ಕಾಗಿ ಬೇಕಾದ ಅನುದಾವನ್ನು ಸರ್ಕಾರದ ಯಾವ ಮೂಲಗಳಿಂದ ಒದಗಿಸಲಾಗಿದೆ.

ಈ) ರಾಜ್ಯದಲ್ಲಿ ಈ ಯೋಜನೆಯು ಯಾವ ಹಂತದಲ್ಲಿ ಅಭಿವೃದ್ಧಿ ಹೊಂದಿದೆ; ಜಿಲ್ಲಾವಾರು ಕೆರೆಗಳ ಅಭಿವೃದ್ಧಿ ಮಾಹಿತಿ ಒಳಗೊಂಡ ಪಟ್ಟಿ ಒದಗಿಸುವುದು;

ಉ) ಈ ಯೋಜನೆಗೆ ಒಳಪಟ್ಟ ಕೆರೆಗಳನ್ನು ಯಾವ ಕಾಲಮಿತಿ ಹಾಕಿಕೋಂಡು ಪೂರ್ತಿಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಹೌದು.

ಆ)

ಸಾಧಿಸಲಾಗಿರುವ ಭೌತಿಕ ಪ್ರಗತಿ

(ಕೆರೆಗಳ ಸಂಖ್ಯೆ)

ಕ್ರ.ಸಂ.	ಜಿಲ್ಲೆ	ಒಟ್ಟು ಕೆರೆಗಳ ಸಂಖ್ಯೆ	ಶೇಕಡ 50ಕ್ಕಿಂತ ಕಡಿಮೆ	ಶೇಕಡ 50ಕ್ಕಿಂತ 74	ಶೇಕಡ 75ಕ್ಕಿಂತ ಹೆಚ್ಚು	ಪೂರ್ಣ ಗೊಂಡಿರುವ ಕೆರೆಗಳು
1	2	3	4	5	6	7
1.	ಬೆಂಗಳೂರು ನಗರ	04	–	–	02	02
2.	ಬೆಂಗಳೂರು (ಗ್ರಾ)	09	02	02	03	02
3.	ಕೋಲಾರ	11	–	05	06	–
4.	ತುಮಕೂರು	13	01	06	06	–
5.	ಚಿತ್ರದುರ್ಗ	07	–	03	04	–
6.	ದಾವಣಗೆರೆ	05	–	02	02	–
7.	ಶಿವಮೊಗ್ಗ	08	–	04	01	3
8.	ಮೈಸೂರು	07	–	07	–	–
9.	ಮಂಡ್ಯ	06	–	01	05	–
10.	ಚಾಮರಾಜನಗರ	05	01	03	01	–
11.	ಹಾಸನ	08	–	05	02	01

1	2	3	4	5	6	7
12.	ಚಿಕ್ಕಮಗಳೂರು	06	–	–	02	04
13.	ದಕ್ಷಿಣ ಕನ್ನಡ	07	01	02	02	02
14.	ಉಡುಪಿ	06	–	–	01	05
15.	ಕೊಡಗು	02	–	–	–	02
16.	ಬೆಳಗಾಂ	15	02	07	04	02
17.	ಧಾರವಾಡ	07	06	–	01	–
18.	ಹಾವೇರಿ	06	05	01	–	–
19.	ಗದಗ್	05	03	02	–	–
20.	ಬಿಜಾಪುರ	08	11	01	02	–
21.	ಬಾಗಲಕೋಟೆ	06	–	–	–	–
22.	ಗುಲ್ಬರ್ಗಾ	12	–	–	01	09
23.	ಬೀದರ್	06	02	02	03	–
24.	ಬಳ್ಳಾರಿ	07	03	–	–	04
25.	ರಾಯಚೂರು	05	–	04	01	–
26.	ಕೊಪ್ಪಳ	05	01	02	02	–
27.	ಉತ್ತರ ಕನ್ನಡ	03	03	–	–	–
	ಒಟ್ಟು	189	42	59	51	36

ಇ) ಈ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮದಿಂದ 20.00 ಕೋಟಿ ರೂ.ಗಳ ಸಹಾಯ ಧನ ದೊರೆತಿದೆ. 2003–04ನೇ ಆಯವ್ಯಯದಲ್ಲಿ 10.00 ಕೋಟಿ ರೂ.ಗಳ ಅನುದಾನ ಒದಗಿಸಿಕೊಳ್ಳಲಾಗಿದೆ. ಅಲ್ಲದೆ ಬರಪೀಡಿತ ತಾಲ್ಲೂಕುಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿ ಸಹ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಈ) ಪ್ರಶ್ನೆ 'ಆ' ನಲ್ಲಿ ನೀಡಿರುವ ಉತ್ತರದಂತೆ

ಉ) ಮೊದಲನೇ ಹಂತದ ಹೆಚ್ಚಿನ ಕೆರೆಗಳನ್ನು ಇನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಸೇತುವೆ ನಿರ್ಮಾಣ

4444 (4943) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ತೆಂಕಕಾರಂದೂರು 'ಗ್ರಾಮದ' 'ಗಿಳಿ ಕಾಪು' ಎಂಬಲ್ಲಿನ 'ಕಿಂಡಿ' ಅಣೆಕಟ್ಟೆಗೆ ಸೇತುವೆ ನಿರ್ಮಾಣದ ಬಗ್ಗೆ 15 ವರ್ಷಗಳಿಂದ ಇರುವ ಬೇಡಿಕೆಯನ್ನು ಸರ್ಕಾರ ಗಮನಿಸಿದೆಯೇ; ಹೌದಾದಲ್ಲಿ ಯಾವಾಗ ಸೇತುವೆ ನಿರ್ಮಾಣವನ್ನು ಕೈಗೊಳ್ಳಲಾವುದು

ಆ) ಸದರಿ ಕಾಮಗಾರಿಗಳ ವಿವರಗಳೇನು?